ಚಾರ ಮಂಟಪ

ಬೆಂಕಿಯ ಸಹಾಯವಿಲ್ಲದೇ ಮೇಣದ ಬತ್ತಿ ಉರಿಯಲು ಸಾ
ಹಾಗೆಯೇ ಆಧ್ಯಾತ್ಮಿಕ ಚಿಂತನೆಯಿಲ್ಲದೇ ಬದುಕಿನಲ್ಲಿ ಸಾಧ
ಬರುವುದಿಲ್ಲ.
– ಭಗವಾನ್ ಬುದ್ಧ

ಂಚಾಂಗ

ಶಾಲಿವಾಹನ ಶಕ 1940,
ಂಬ ನಾಮ ಸಂವತ್ಸರ, ಶುಕ್ಲ ಪಕ್ಷ,
ಣ, ಫಾಲ್ಗುಣ ಮಾಸ, ಶಿಶಿರ ಋತು
ು. : 07.00, ಸೂ. ಅ : 18.11

ನವಮಿ / ನಕ್ಷತ್ರ : ರೋಹಿಣಿ
ಕಾಲ : 10.13 ರಿಂದ 12.00
ುಕಾಲ : 9.00 10.30
ುಗಂಡ ಕಾಲ : 1.30 3.00
ಕ ಕಾಲ : 6.00 7.30
ವಿಶೇಷ : ಶೃಂಗೇರಿಯಲ್ಲಿ
ುರ್ಗಾಂಬಾ ರಥೋತ್ಸವ.

ದಶಮಿ / ನಕ್ಷತ್ರ : ಆರ್ದ್ರಾ
ಕಾಲ : 10.13 ರಿಂದ 12.00
ುಕಾಲ : 9.00 10.30
ುಗಂಡ ಕಾಲ : 1.30 3.00
ಕ ಕಾಲ : 6.00 7.30
ವಿಶೇಷ : ಹುಲಿಕುಂಟೆ ಪ್ರಾಣೇಶ ರಥ,
ಮಾರಿಕಾಂಬ ಜಾತ್ರೆ



ುರಿಕಾಂಬಾ ಜಾತ್ರೆ | ಫೆ. 25

**ನೃತ್ಯ ಹೃದಯ ಹೃದಯಗಳನ್ನು ಬೆಸೆಯುತ್ತದೆ. 'ಆಡಿದನಾಡಿದನಾಹಾ ಶಂಕರ, ಆಡಿದನಾ ಗುಂಡನ ಮುಂದೀಶ್ವರ' ಹೀಗೆ ಆಕಾಶ ಭೂಮಿಗಳು ಈ ಭಕ್ತ ಭಗವಂತರ ನೃತ್ಯದಲ್ಲಿ ಒಂದಾಗುತ್ತವೆ. ರಾಧಾಕೃಷ್ಣರ ರಾಸನೃತ್ಯ ಆರಾಧಿತ- ಆರಾಧಕ ಜೀವಗಳ ನಡುವಿನ ಅದ್ಭುತ ಸಂಬಂಧದ ಪ್ರತೀಕವಾಗಿದೆ.**

# ಸ್ವರ್ಗೀಯ ಸಂಬಂಧ ನಾಟ್ಯ ತಂತು

ಡಾ.ಎಲ್.ಜಿ. ಮೀರಾ
feedback@bodhivruksha.com



ನೃತ್ಯದ ಆರಾಧ್ಯ ದೈವವಾದ ಶಿವ ಒಬ್ಬ ವಿಶ್ವಾತ್ಮಕ ನಟವರ. ಅವನ ದೇಹ ಇಡೀ ಲೋಕ. ಅವನ ಮಾತು ಎಲ್ಲರ ಮಾತು. ಅವನ ಒಡವೆಗಳು ಚಂದ್ರ ಮತ್ತು ತಾರೆಗಳು! 'ಅಂತಹ ಸತ್ವವುಳ್ಳ ಶಿವನಿಗೆ ನಮಸ್ಕರಿಸುತ್ತೇನೆ?' ಎನ್ನುವವನು ನರ್ತಕ. ತಾಂಡವಮೂರ್ತಿಯಾಗಿ ನರ್ತಿಸುವ ಶಿವ ಉಮಾಮಹೇಶ್ವರನೂ ಹೌದು. ಆ ದೈವೀದಂಪತಿ ನರ್ತಿಸುತ್ತಲೇ ಅರ್ಧನಾರೀಶ್ವರರಾಗುತ್ತಾರೆ.



ಇಲಸ್ಟ್ರೇಷನ್: ಕಿರಣ್ ಮಾಡಾಳು

### ರುಚಿರ ಪದ ರಚನೆ

ಕೆಲವೊಮ್ಮೆ ನಾಟ್ಯಪ್ರಿಯ ಶಿವನು ಸ್ಪರ್ಧಾಲಹರಿಯ ಹುರುಪಿನಲ್ಲಿದ್ದಾಗ ತನ್ನ ಮನದನ್ನೆಯನ್ನು ಸವಾಲಿಗೆಳೆಯುತ್ತಾನೆ. ಆಗ ಊರ್ಧ್ವಪಾದ ತಾಂಡವದಲ್ಲಿ ತನ್ನ ಕಾಲನ್ನು ಹಣೆಯ ಮೇಲೆತ್ತಿ ಅವಳನ್ನು ಛೇಡಿಸುತ್ತಾನೆ. ಅಂದರೆ ಶಬ್ದಾರ್ಥಗಳಂತೆ ಎರಡರಿಯದೆ ಒಂದಾಗಿರುವ ಈ ದಂಪತಿ ಪರಸ್ಪರ ಛೇಡಿಸಿಕೊಳ್ಳುವುದು ನೃತ್ಯದ ಮೂಲಕ! ಆ ಪ್ರಿಯವಾದ ಹುಸಿಮುನಿಸಿನ ಪ್ರಣಯನಾಟ್ಯದ ತುರೀಯಬಿಂದುವಿನಲ್ಲಿ ಅವರ ಆತ್ಮಗಳು ಎರಡಳಿದು ಒಂದಾಗುತ್ತವೆ. ಸರಸ್ವತಿಯನ್ನು ನಮ್ಮ ಆದಿಕವಿ ಪಂಪ ಚತುರ ರುಚಿರ ಪದ ರಚನೆ ಎಂದಿದ್ದಾನೆ. ಇಲ್ಲಿ ನಾಟ್ಯಸರಸ್ವತಿಯ ಕಲ್ಪನೆ ಇದೆ. ಕಾವ್ಯದಲ್ಲಿ ಪದಗಳ ಕುಣಿತ. ಸಂಗೀತದಲ್ಲಿ ಸ್ವರಗಳ ಕುಣಿತ. ಚಿತ್ರಗಳಲ್ಲಿ ಬಣ್ಣಗಳ ಕುಣಿತ.

### ಗೂಗಲ್‌ನಲ್ಲೂ ಗುರುಕುಲ ಸಂಬಂಧ

ಗೂಗಲ್ ಯುಗದಲ್ಲೂ ಸಂಗೀತ-ನೃತ್ಯ ಕ್ಷೇತ್ರದಲ್ಲಿ ಗುರು ಶಿಷ್ಯರ ಸಂಬಂಧವು ಗುರುಕುಲದ ದಿನಗಳ ಗುರು-ಶಿಷ್ಯ ಸಂಬಂಧತಂತುಗಳನ್ನು ಉಳಿಸಿಕೊಂಡಿದೆ. ಕಲಿಕೆಯು ಪ್ರಾರಂಭವಾದಾಗ ಗುರುಶಿಷ್ಯರು ಪರಸ್ಪರ ಗೆಜ್ಜೆ ಕೊಟ್ಟು ತೆಗೆದುಕೊಳ್ಳುವ ಸಂಪ್ರದಾಯವನ್ನು ಪಾಲಿಸುತ್ತಾರೆ. ವಿದ್ಯೆಯನ್ನು ಕೊಟ್ಟು ತೆಗೆದುಕೊಳ್ಳುವ ಜ್ಞಾನತಂತುವಿನ ಬೆಸೆಯುವಿಕೆ ಅದು.

### ಸಿರಿತನ ಬಡತನಗಳ ಅಂತರವಿಲ್ಲ

ಜೀವಸಂಭ್ರಮದ ನೃತ್ಯಕ್ಕೆ ಸಿರಿತನ ಬಡತನಗಳ ಭೇದವಿಲ್ಲ. ಹರಿಹರನ ರಗಳೆಯಲ್ಲಿ ಬಡ ಗುಡಿಸಲಿನಲ್ಲಿರುವ ಕುಂಬಾರ ಗುಂಡಯ್ಯ ಶಿವಭಕ್ತಿಯ ತಲ್ಲೀನತೆಯಲ್ಲಿ ಮಡಿಕೆ ಮಾಡುತ್ತಾ ಮೈಮರೆತು ಕುಣಿಯುವಾಗ, ಶಿವನೇ ಆ ಕುಣಿತಕ್ಕೇ ಜೊತೆ ನೀಡುತ್ತಾನೆ. 'ಒಂದು ಪದವು ಪಾತಾಳವನೊತ್ತಲ್, ಒಂದು ಪದವು ಬ್ರಹ್ಮಾಂಡವನೆತ್ತಲ್ ..... ಆಡಿದನಾಡಿದನಾಹಾ ಶಂಕರ, ಆಡಿದನಾ ಗುಂಡನ ಮುಂದೀಶ್ವರ?'. ಆಕಾಶ ಭೂಮಿಗಳು ಈ ಭಕ್ತ ಭಗವಂತರ ನೃತ್ಯದಲ್ಲಿ ಒಂದಾಗುತ್ತವೆ.

ನಮ್ಮ ಆದಿವಾಸಿಗಳ, ಗ್ರಾಮೀಣರ ಹಬ್ಬ ಮದುವೆ ಉತ್ಸವಗಳು ಕುಣಿತವಿಲ್ಲದೆ ನಡೆಯುವುದೇ ಇಲ್ಲ. ಶಿಷ್ಟ ಪರಂಪರೆಯಲ್ಲೂ ನೃತ್ಯವು ಭಗವಂತನನ್ನು ಒಲಿಸಿಕೊಳ್ಳುವ ಪೂಜೆಯ ಭಾಗ (ಗೀತಂ ಸಮರ್ಪಯಾಮಿ, ನೃತ್ಯಂ ಸಮರ್ಪಯಾಮಿ). ದೇವದಾಸಿ ಪರಂಪರೆಯಲ್ಲಿ ನರ್ತಕಿಯು ಕುಣಿಯುತ್ತಾ ತನ್ನನ್ನು ತಾನು ಭಗವಂತನಿಗೆ ಸಮರ್ಪಿಸಿಕೊಳ್ಳುತ್ತಾಳೆ. ಭಕ್ತ ಮೀರಾಳು ಕೂಡ ತನ್ನ ಆರಾಧ್ಯ ದೈವವಾದ ನರ್ತಿಸುವ ಭಕ್ತೆಯೇ. 'ಪಗ್ ಘುಂಘುರ್ ಬಾಂದ್ ಮೀರಾ ನಾಚೀರೆ!'

ನೃತ್ಯಭಾವ

### ರಾಸನೃತ್ಯ ವೈಭವ

ಬೃಂದಾವನದಲ್ಲಿನ ರಾಧಾಕೃಷ್ಣರ ರಾಸನೃತ್ಯವನ್ನು ಮರೆಯಲಾದೀತೇ? ಒಬ್ಬೊಬ್ಬ ಗೋಪಿಕೆಗೂ ಪ್ರತ್ಯೇಕ ಕೃಷ್ಣನಾಗಿ ಆವಿರ್ಭವಿಸಿ ಸಹನಾಟ್ಯದ ಆನಂದವನ್ನು ಭಗವಂತನು ಅನುಭವಿಸುವ ಸುಂದರ ಸನ್ನಿವೇಶ ಅದು. ಇದು ಆರಾಧಿತ- ಆರಾಧಕ ಜೀವಗಳ ನಡುವಿನ ಪ್ರತೀಕ ಅಲ್ಲವೆ?

### ಮನಸ್ಸು ಆತ್ಮಗಳ ಸಮ್ಮಿಲನ

ಮಾನಸಿಕ ಕಾಯಿಲೆಗಳ ಚಿಕಿತ್ಸೆಯಲ್ಲಿ ನರ್ತನವನ್ನು ಬಳಸುತ್ತಾರೆ. ಏಕೆಂದರೆ ನಾಟ್ಯಕಲೆಯಲ್ಲಿ ದೇಹ ಮನಸ್ಸು ಆತ್ಮ ಅಭಿನ್ನವಾಗಿ ಸೇರಿಹೋಗುತ್ತವೆ. ಒಟ್ಟಿಗೆ ಕುಣಿವವರು ಒಂದಾಗುತ್ತಾರೆ. ಆದಿವಾಸಿಗಳ ಬಳಗರೂಪೀ ಗಟ್ಟಿಬಂಧಕ್ಕೆ ಮತ್ತು ಸಹನರ್ತಕರ ಮಾತೇ ಬೇಡದ ಮನಗಳ ಅನುರಣನಕ್ಕೆ ಅವರ ಜೊತೆಕುಣಿತವೂ ಒಂದು ಮುಖ್ಯ ಕಾರಣವಾಗಿರುತ್ತದೆ.

ನಮ್ಮ ಹರಿದಾಸರು, ನವೋದಯದ ಕವಿಗಳು ಕುಣಿತದ ಬಗ್ಗೆ ಅನೇಕ ಕಡೆಗಳಲ್ಲಿ ಪ್ರಸ್ತಾಪ ಮಾಡುತ್ತಾರೆ. ಭಕ್ತನು ನಿಂತು ಪಾಡಿದರೆ ಹರಿ ನಲಿಯುತ್ತಾನೆ. ಭಕ್ತ ನಲಿದರೆ ಹರಿ ಒಲಿಯುತ್ತಾನೆ. ಇಂತಹ ಹರಿಯ ಕುಣಿತವನ್ನು 'ಹರಿ ಕುಣಿದಾ ನಮ್ಮ ಹರಿ ಕುಣಿದಾ' ಎಂದು ಹರಿದಾಸರು ವರ್ಣಿಸುತ್ತಾರೆ. ದೇವಸ್ಥಾನಗಳಲ್ಲಿ, ಮೆರವಣಿಗೆಗಳಲ್ಲಿ ನಾವು ನೋಡುವ ಭಕ್ತರ ಕುಣಿತ ಈ ತಲ್ಲೀನ ಭಕ್ತಿಯ ಮುಂದುವರಿಕೆ ಅಲ್ಲವೇ?

### ಕುಣಿಯೋಣು ಬಾರಾ

ಬೇಂದ್ರೆಯವರ ಕವಿತೆ 'ಕುಣಿಯೋಣು ಬಾರಾ ಕುಣಿಯೋಣು ಬಾ? ಕವಿಗಳ ನಾಟ್ಯಪ್ರಿಯತೆಗೆ ಅದ್ಭುತ ಉದಾಹರಣೆ. ಕುವೆಂಪು ಅವರ 'ಕುಣಿಯುವಂತೆ ಮತ್ತಶಿಖಿ? ಸಹ ಕೃಷ್ಣನ ಕುಣಿತವನ್ನು ಸಂಭ್ರಮಿಸುವ ಸುಂದರ ಭಾವಗೀತೆ. ಕುವೆಂಪು ಬಳ್ಳಿಯನ್ನು 'ಲತಾನಟಿ' ಎಂದಿದ್ದಾರೆ. ಕವಿಯ ಕಣ್ಣಿಗೆ ಮರಗಳು ಕೊಂಬೆಕೈಕಾಲುಗಳ ಕುಣಿತ ನಿಲ್ಲಿಸಿ ಹೆಪ್ಪುಗಟ್ಟಿದಂತೆ ಕಾಣುತ್ತವಲ್ಲವೆ?

ಒಟ್ಟಿನಲ್ಲಿ ನೃತ್ಯವನ್ನು ಒಂದು ಜೀವಂತ ಸಂಬಂಧ ಬೆಸೆಯುವ ತಂತು ಎನ್ನಲು ಅಡ್ಡಿಯಿಲ್ಲ. ದೇಶ ದೇಶಗಳ ನಡುವಿನ ನರ್ತನದ ಸ್ಪರ್ಧೆಯಿಂದ ಜೀವಗಳು ಅರಳುತ್ತವೆ! ಸಂಬಂಧಗಳು ಗಟ್ಟಿಗೊಳ್ಳುತ್ತವೆ.


ಸತ್ಸಂಗ 63

ಡಾ || ಪಾವಗಡ ಪ್ರಕಾಶ ರಾವ್

## ಕೃಷ್ಣನ ಸಾವಿಗೆ ಕಾರಣ

▶ ಶ್ರೀಕೃಷ್ಣನ ಮೇಲೆ ರಾಕ್ಷಸರಾದಿಯಾಗಿ ದು
ಆಕ್ರಮಣ ಮಾಡಿದರೂ ಆತನಿಗೆ ಏನೂ ಆಗುವುದಿಲ್ಲ
ಒಂದು ಬಾಣದ ಮೊನಚು ಪಾದಕ್ಕೆ ತಗುಲಿದ ಕೂಡ
ಸಮಾಪ್ತಿಯಾಗುತ್ತದೆ. ಈ ತತ್ವದ ಹಿಂದಿನ ರಹಸ್ಯವೇನ
ಶ್ರೀ

ಶ್ರೀಕೃಷ್ಣನ ಪಾತ್ರ ಅತ್ಯಂತ ಸಂಕೀರ್ಣ. ಹೀಗೆ
ಚರ್ಯೆಯನ್ನು ಅರ್ಥೈಸುವುದು ಕಷ್ಟ. ಕುಳಿತ ಜಾಗದ
ಏನೂ ಮಾಡಬಲ್ಲವನಾದರೂ ಪ್ರಯಾಸದಿಂದ ಗೆ
ಸುತ್ತಾನೆ! ಶಿಶುಪಾಲೇತ್ಯಾದಿಗಳೊಡನೆ ಯುದ್ಧ ಮಾಡಿ
ಜರಾಸಂಧನಿಂದ ಹಲ ಬಾರಿ ಸೋತೂ ಹೋಗುತ್ತಾ



ಸಾಯಿಸುತ್ತಾನೆ ಭೀಷ್ಮ, ದ್ರೋಣೇತ್ಯಾದಿಗಳನ್ನು! ಹ
ಇಲ್ಲವೇನೋ; ಕಷ್ಟ ಪಡುತ್ತಿದ್ದಾನೆ ಎಂದುಕೊಂಡರೆ,
ಎಂಟರ ವಯಸ್ಸಿನಲ್ಲೇ ಚಾಣೂರನನ್ನು ಸದೆ ಬಡಿಯ
ಆನೆಯನ್ನೇ ಗಿರಗಿರ ತಿರುಗಿಸಿ ಎಸೆಯುತ್ತಾನೆ.
ವಿಶೇಷವಾಗಿ, ಮತ್ಯಾರೂ ಮಾಡಲು ಸಾಧ್ಯವಿಲ್ಲ
ಸಂದರ್ಭದಲ್ಲಿ ತನ್ನ ಸುದರ್ಶನದಿಂದ ಸೂರ್ಯನನ್ನೇ
ಬಾಲಕನಾಗಿದ್ದಾಗ ಬ್ರಹ್ಮಾಂಡವನ್ನೇ ಬಾಯಲ್ಲಿ
ಭಗವಂತನೆಂದು ಭಕ್ತರು ಭಜಿಸುತ್ತಾರೆ. ಏನು
ಅರ್ಥೈಸೋಣ ಕೃಷ್ಣ ನಿರ್ಯಾಣವನ್ನು?

### ಪ್ರಚಲಿತ ವ್ಯಾಖಾನ